<u>ದಿಃ 28.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರಿದ ಮುಖ್ಯವಿಚಾರಣೆಃ ಶ್ರೀ ಜಿ.ಹೆಚ್.ಎನ್., ವಾದಿ ಪರ ವಕೀಲರಿಂದಃ</u>

ನಾನು ಈ ದಾವಾದಲ್ಲಿ ವಾದಿಗಳ SPA ದಾರನಾಗಿದ್ದು, ಈ ದಿನ ನನ್ನ ಸಾಕ್ಷ್ಯ ಹೇಳಿಕೆ ಬಾಬ್ತು ನ್ಯಾಯಾಲಯಕ್ಕೆ ಪ್ರಮಾಣಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ನನ್ನ ಹೇಳಿಕೆ ಮೇರೆಗೆ ಈ ಪ್ರಮಾಣಪತ್ರಿಕೆಯನ್ನು ತಯಾರಿಸಲಾಗಿದೆ. ಇದರಲ್ಲಿ ಹೇಳಿರುವ ವಿಚಾರಗಳು ಸತ್ಯವಾಗಿವೆ. ಅದರಂತೆ ಈ ಸಾಕ್ಷಿಯನ್ನು PW-2 ಎಂದು ಪರಿಗಣಿಸಲಾಯಿತು.

2. ವಾದಿಗಳು ನನಗೆ ವಿಶೇಷ ಅಧಿಕಾರ ಪತ್ರವನ್ನು ದಿಃ 2.8.2025 ರಂದು ನೀಡಿದ್ದು, ಅದನ್ನು ಈಗ **ನಿ.ಪಿ-1** ಎಂದು ಗುರುತಿಸಲಾಯಿತು.

(ಈ ಹಿಂದೆ PW-1 ಪರವಾಗಿ ನಿ.ಪಿ-1 ರಿಂದ 10 ದಾಖಲೆಗಳನ್ನು ಗುರುತಿಸಲಾಗಿದ್ದು, ಅವುಗಳನ್ನು ಪುನಃ PW-2 ರವರ ಮುಖಾಂತರ ಗುರುತಿಸಲು ಅನುಮತಿಸಲಾಗಿದೆ.)

3. ಈ ಕೇಸಿನಲ್ಲಿ ವಾದಿಗಳು ಹಾಜರುಪಡಿಸಿರುವ ಜಕ್ಕಸಂದ್ರ ಲೆಕ್ಕಾಧಿಕಾರಿಗಳು ದಿಃ 5.9.2005 ರಂದು ನೀಡಿರುವ ವಂಶವೃಕ್ಷವನ್ನು ಈಗ ನೋಡುತ್ತಿದ್ದು, ಅದನ್ನು **ನಿ.ಪಿ-2** ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಖ್ಯವಿಚಾರಣೆಯನ್ನು ಮುಂದೂಡಲಾಗಿದೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಎಂ. ಚಂದ್ರಶೇಖರ್ ರೆಡ್ಡಿ)
ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.